ಉಣ್ಣಿಗಳನ್ನು ಚೀಕಿ ತೆಗೆಯುತ್ತಿದ್ದಳು. ಆ ಹೊತ್ತಲ್ಲಿ ಅಡುಗೆಯಾಳು ನಾಣು ಮತ್ತು ಕುಟ್ಟ ಸೌದೆ ಕೊಟ್ಟಿಗೆಯ ಬಾಗಿಲಲ್ಲಿ ಪ್ರತ್ಯಕ್ಷವಾದರು.

ತಾಯಿಯ ಕಣ್ಣುಗಳ ಆಲಸ್ಯ ಮರೆಯಾಯಿತು. ಆಕ್ರಮಿಸಲು ಬರುವವರತ್ತ ಒಮ್ಮೆ ನೋಟ ಬೀರಿದಳು.

ರಕ್ಷಿಸಿಕೊಳ್ಳುವುದಕ್ಕೆ ಇರುವ ಏಕೈಕ ದಾರಿಯಾಗಿರುವ ಬಾಗಿಲಿನಲ್ಲಿಯೇ ಶತ್ರುಗಳು ನಿಂತಿದ್ದಾರೆ. ಜಯವು ಮನುಷ್ಯರ ಕಡೆಗೆ ಎನ್ನುವುದು ದೃಢ ನಿಶ್ಚಯ. ತಾಯಿ ನಾಯಿ ರಕ್ಷಣೆಗೇನಾದರೂ ಬೇರೆ ದಾರಿಯಿದೆಯೋ, ಎಂದು ಸುತ್ತಲ್ಲೂ ನೋಡಿತು. ಅಮ್ಮನ ಮುಖದ ಭಯ ರೋಸಿಗೆ ಸ್ಪಷ್ಟವಾಗಿ ಕಾಣಲು ಸಾಧ್ಯವಾಯಿತು. ಆಕ್ರಮಿಸಲು ಬರುವವರ ಕೈಯಲ್ಲಿ ಬಡಿಗೆ ಇಲ್ಲವಾಗಿದ್ದರೆ ತಾಯಿ ಮತ್ತು ಅವಳೂ ಸೇರಿ ಒಂದು ಕೈ ನೋಡಿಯೇ ಬಿಡುತ್ತಿದ್ದರು.

ಆಕ್ರಮಣ ಮಾಡಬೇಕಾದುದು ಯಾವ ರೀತಿಯಲ್ಲಿ ಎಂಬುದನ್ನು ಮೊದಲೇ ನಾಣು ವ್ಯವಸ್ಥಿತವಾಗಿ ಯೋಜಿಸಿದ್ದ.

"ಕುಟ್ಟನ್ ನೀನು ಇಲ್ಲಿ ನಿಲ್ಲು. ಮೇಲೆ ಏರಿ ನಾನು ಹೊಡೆಯುತ್ತೇನೆ."

"ನಾಣು, ನಾಯಿ ನನ್ನ ಮೇಲೆ ಎರಗಿದರೆ?"

"ಅದಕ್ಕೂ ಮೊದಲೇ ನಾನು ಹೊಡೆದುರುಳಿಸುತ್ತೇನೆ."

ಕುಟ್ಟ ಧೈರ್ಯ ತಂದುಕೊಂಡು ಬಾಗಿಲ ಬಳಿ ನಿಂತ. ಅಡುಗೆಯಾಳು ಮುಂದಕ್ಕೆ ಸರಿಯುವುದಷ್ಟೆ ತಡ, ತಾಯಿ ನಾಯಿ ಗರಿಯ ನಡುವಿನ ಸೆರೆಯಲ್ಲಿ ಕಷ್ಟದಿಂದ ನುಸುಳಿ ಹೊರಗೋಡಿತು. ನಾಣುವಿನ ಪೆಟ್ಟು ಗರಿಯ ತಟ್ಟಿಗೆ.

"ಕುಟ್ಟಾ, ಮೋಸ ಮಾಡಿತು, ನಾಯಿ ಓಡಿತು."

"ಬಿಡಬಾರದು..."

ಇಬ್ಬರೂ ನಾಯಿಯನ್ನು ಬೆಂಬತ್ತಿ ಹೊರಗಡೆಗೆ ಓಡಿದರು. ಹಾಯ್, ರೋಸಿ ಒಮ್ಮೆ ಉಸಿರು ಬಿಟ್ಟಳು. ತಾಯಿ ತಪ್ಪಿಸಿಕೊಂಡುದರಿಂದ ಅವರು ನನ್ನನ್ನು ಸಿಟ್ಟಿನಿಂದ ಹೊಡೆದಾರೋ ಎಂಬುದೇ

